ಶ್ರೀ ಮಹಮದ್ ಮೊಯಿನುದ್ದೀನ್:– ಅಧ್ಯಕ್ಷರೇ, ಮಾನ್ಯ ಮಂತ್ರಿಗಳು, ಐದು ಪ್ಲಾರ ಸಾಲಭ್ಯ ನಿವೇಶನಗಳನ್ನು ವಸತಿ ನಿವೇಶಗಳನ್ನಾಗಿ ಪರಿವರ್ತಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಲಿಸ್ಟ್‌ನಲ್ಲಿ ೧೮ ಲೇಔಟ್ಸ್ ಬಗ್ಗೆ ಡೀಟೇಲ್ ಕೊಟ್ಟಿದ್ದಾರೆ. ಈ ವ್ಯತ್ಯಾಸಕ್ಕೆ ಕಾರಣ ಏನು?

ಶ್ರೀ ಎ. ಲಕ್ಷ್ಮೀಸಾಗರ್:– ಅಧ್ಯಕ್ಷರೇ ಸಿವಿಕ್ ಅಮಿನಿಟೀಸ್ ಸೈಟ್ಸ್‌ನ್ನು ಪರಿವರ್ತನೆ ಮಾಡಿ ರೆಸಿಡೆನ್ಸಿಯಲ್ ಸೈಟ್ ಎಂದು ಕೊಟ್ಟಿರುವುದು ೫ ಎಂದಂ ಹೇಳಿದ್ದೇನೆ. ಹಾಗೂ ಆ ಐದರ ವಿವರ ಕೂಡಾ ಕೊಟ್ಟಿದ್ದೇನೆ,

ಶ್ರೀ ಮಹಮದ್ ಮೊಯಿನುದ್ದೀನ್– ಅದು ೫ ಲೇಔಟ್ಸ್ ಆಗುತ್ತದೆ. ಅದು ೧೮ ಲೇಔಟ್ಸ್ ಆಗುವುದಿಲ್ಲ. ನೀವು ೯೯ ಲಿಸ್ಟ್ ಕೊಟ್ಟಿದ್ದೀರಿ. ಇವತ್ತು ಲಿಸ್ಟ್‌ನಲ್ಲಿ ಸೀರಿಯಲ್ ನಂ. ೨೨ ಜಾಯಿಂಟ್ ಡೈರೆಕ್ಟರ್ ಆಫ್ ಪಬ್ಲಿಕ್ ಇನಾಸ್ಟ್ರಕ್ಷನ್ ಎಂದು ಹೇಳಿದ್ದೀರಿ. ಅವರು ಒಂದು ಸಂಸ್ಥೆಯೇ? ಅದೇ ರೀತಿ ಸೀರಿಯಲ್ ನಂ. ೨೮ರಲ್ಲಿ ಶ್ರೀ ಕೆ. ರಾಮಾದಾಸ್, ಹಮೂ ಡಿಸ್ಟ್ರಿಬ್ಯೂಟರ್ಸ್ ಎಂದು ಇದೆ. ಅವರು ಒಂದು ಸಂಸ್ಥೆಯೇ? ಹಾಗೆ ಕ್ರಮ ಸಂಖ್ಯೆ ೪೮ರಲ್ಲಿ ಶ್ರೀಧರ್ ಫಾರ್ ಬಿ.ಪಿ.ಜಿ. ಗೋಡೋನ್ ಎಂದು ಇದೆ. ಇದಂ ಒಂದು ಸಂಸ್ಥೆಯೇ ಇನ್ನು ಸಂಖ್ಯೆ ೪೯ರಲ್ಲಿ ಆರ್.ಪಿ.ಸಿ. ಲೇಔಟ್, ವಿಜಯನಗರ ಕ್ಲಬ್ ಎಂದು ಇದೆ. ಇದರ ಉದ್ದೇಶ ಏನು

SRI. A. LAKSHMISAGAR :– if the emphasis is on institution I do not have the details with me. About the allotmant of sites to Sri Ramdas it is the Gas Company, the matter has been taken to the High Court and the writ petition is pending.

ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿರುವ ನಿರುದ್ಯೋಗಿಗಳ ಪಟ್ಟಿ

೧೨೩೨ ಕೆ, ಎಂ. ಕೃಷ್ಣರೆಡ್ಡಿ (ಚಿಂತಾಮಣಿ) – ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯಶ್ರೀ ಕಾರ್ಮಿಕ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ

ಅ) ಕೋಲಾರದ ಉದ್ಯೋಗ ವಿನಿಮಯ ಕಛೇರಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿರುವ ನಿರುದ್ಯೋಗಿಗಳ ಪೈಕಿ ಪದವೀಧರರು ಪಿ.ಯು.ಸಿ. ಮತ್ತು ಎಸ್.ಎಸ್.ಎಲ್.ಸಿ.ಯಲ್ಲಿ ಅನುತ್ತೀರ್ಣರಾದವರ ಸಂಖ್ಯೆ ಎಷ್ಟು?

ಆ) ಮೇಲೆ ಹೇಳಿರುವ ನೋಂದಾಯಿತ ಉದ್ಯೋಗಾರ್ಥಿಗಳ ಜೇಷ್ಠತೆಯ ಪಟ್ಟಿಯನ್ನು ಕಡೆ ಪಕ್ಷ ಆರು ವರ್ಷದ ಅವಧಿಯಲ್ಲಿ ಸರ್ಕಾರ ಪ್ರಕಟಿಸುವುದೇ?

ಇ) ಸರ್ಕಾರವು ಅಂತಹ ಪ್ರಕಟಿತ ಪಟ್ಟಿಯ ಒಂದು ನಕಲನ್ನು ಸ್ಥಳೀಯ ವಿಧಾನಸಭಾ ಸದಸ್ಯರಿಗೆ ಕೊಡುವಂತೆ ಮತ್ತು ಜೇಷ್ಠತೆಯ ಪಟ್ಟಿಯನ್ನು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಲು ಜಿಲ್ಲಾ ಉದ್ಯೋಗಾಧಿಕಾರಿಯವರಿಗೆ ಆದೇಶ ನೀಡುವುದೇ?

ಶ್ರೀ ಡಿ. ಮಂಜುನಾಥ (ಕಾರ್ಮಿಕ ಸಚಿವರು)–

ಅ) ದಿನಾಂಕ ೩೧–೭–೮೫ರಂದು ಒಟ್ಟು ೨೭,೭೧೩ ಅಭ್ಯರ್ಥಿಗಳು ಕೋಲಾರದ ಉದ್ಯೋಗ ವಿನಿಮಯ ಕೇಂದ್ರದಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಜೇಷ್ಠತಾ ದಾಖಲೆಯಲ್ಲಿದ್ದ ಉದ್ಯೋಗಾಕಾಂಕ್ಷಿಗಳಾಗಿದ್ದಾರೆ. ಅವರುಗಳ ಪೈಕಿ ೧,೮೨೯ ಪದವೀಧರರು, ೩೧,೨೮ ಪಿ.ಯು.ಸಿ, ಮತ್ತು ೯,೯೮೮ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾದವರು ಹಾಗೂ ೪,೬೧೬ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿಯಲ್ಲಿ ಅನುತ್ತೀರ್ಣರಾದವರು ಇರುತ್ತಾರೆ.

ಆ) ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಿತ ಅಭ್ಯರ್ಥಿಗಳ ಸೂಚೀ ಪತ್ರವನ್ನು ಆಯಾ ವೃತ್ತಿ ಮತ್ತು ವರ್ಗವನ್ನು ಅನುಸರಿಸಿ, ಜೇಷ್ಠತೆಯ ಆಧಾರದ ಮೇಲೆ ಜೋಡಿಸಿಟ್ಟುಕೊಂಡು ಬರಲಾಗಿದೆ. ನೋಂದಾಯಿತ ಅಭ್ಯರ್ಥಿಗಳ ಜೇಷ್ಠತೆಯ ಪಟ್ಟಿಯನ್ನು ತಯಾರು ಮಾಡಿ ಪ್ರಕಟಪಡಿಸುವುದು ಅಸಾಧ್ಯವಾದ ಕಾರ್ಯವಾಗಿರುತ್ತೆ. ಮೇಲಾಗಿ ಅಭ್ಯರ್ಥಿಗಳ ಜೇಷ್ಠತೆ ಪಟ್ಟಿಯನ್ನು ಈ ಕೆಳಗಿನ ಕಾರಣಗಳಿಂದ ಪ್ರಕಟಿಸುವುದು ಕಷ್ಟವಾಗಿ ಕಂಡುಬರುತ್ತಿದೆ.

೧) ಅಭ್ಯರ್ಥಿಗಳ ಸೂಚಿತ ಪತ್ರವು ಒಂದು ಉದ್ಯೋಗ ವಿನಿಮಯ ಕೇಂದ್ರದಿಂದ ಮತ್ತೊಂದು ಉದ್ಯೋಗ ವಿನಿಮಯ ಕೇಂದ್ರಕ್ಕೆ ಆಗಿಂದಾಗ್ಗೆ ವರ್ಗವಾಗುವುದರಿಂದಲೂ,

೨) ಜಾತಿ ದೃಢೀಕರಣ ಪತ್ರಗಳನ್ನು ಅಭ್ಯರ್ಥಿಗಳು ವಂಡಿಸುವುದರಿಂದಾಗುವ ವರ್ಗೀಕರಣ–ಗಳಿಂದಲೂ ಮತ್ತು,

೩) ಅಭ್ಯರ್ಥಿಗಳು ನೋಂದಾಯಿಸಿಕೊಂಡ ನಂತರ ಗಳಿಸುವ ಹೆಚ್ಚಿನ ವಿದ್ಯಾರ್ಹತೆ ಅಥವಾ ಕೆಲಸದ ಅನುಭವದಾರರ ಮೇಲೆ ವೃತ್ತಿ ಸಂಖ್ಯೆಯಲ್ಲಿ ಬದಲಾವಣೆಯಾಗುವ ಕಾರಣಗಳಿಂದಾಗಿ ಜೇಷ್ಠತೆಯ ಪಟ್ಟಿಯನ್ನು ಪ್ರಕಟಿಸುವುದು ಸಾಧ್ಯವಾಗುವುದಿಲ್ಲ.

೪) ಈಗಾಗಲೇ ಮೇಲೆ ಹೇಳಿರುವ ಕಾರಣಗಳಿಂದ ಇದು ಸಾಧ್ಯವಿಲ್ಲ. ಆದಾಗ್ಯೂ ಸ್ಥಳೀಯ ವಿಧಾನಸಭಾ ಸದಸ್ಯರುಗಳು ಈ ವಿಚಾರವಾಗಿ ಯಾವಾಗ ಬೇಕಾದರೂ ಉದ್ಯೋಗ ವಿನಿಮಯ ಕೇಂದ್ರಗಳಿಗೆ ಭೇಟಿಕೊಡಬಹುದಾಗಿದೆ. ಮತ್ತು ತಮಗೆ ಬೇಕಾದ ಮಾಹಿತಿಯನ್ನು ಪಡೆಯ–ಬಹುದಾಗಿದೆ.

ಶ್ರೀ ಕೆ. ಎಂ. ಕೃಷ್ಣರೆಡ್ಡಿ– ಅಧ್ಯಕ್ಷರೇ, ಉದ್ಯೋಗ ವಿನಿಮಯ ಕೇಂದ್ರದಲ್ಲಿ ಸಾವಿರಾರು ಜನ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದರೂ ಕೂಡಾ ಹತ್ತಾರು ವರ್ಷಗಳಾದರು ತಮಗೆ ಒಂದೂ ಸಂದರ್ಶನಗಳು ಬಂದಿಲ್ಲ ಎನ್ನುವ ನಿದರ್ಶನಗಳು ಬೇಕಾದಷ್ಟು ಇವೆ. ಈ ದೂರು ಇಲ್ಲದ ಹಾಗೆ ಅವರಿಗೆ ನ್ಯಾಯವನ್ನು ಒದಗಿಸಿಕೊಡಲು ಅವರುಗಳ ಸೀನಿಯಾರಿಟಿ ಬಗ್ಗೆ ಪಟ್ಟಿಯನ್ನು ಪ್ರಕಟಿಸಿದರೆ ಖಂಡಿತವಾಗಿ ಎಲ್ಲರಿಗೂ ಒಳ್ಳೆಯ ಅವಕಾಶ ಸಿಗುತ್ತದೆಂದು ನಾನು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ. ಆದ್ದರಿಂದ ಅವರ ಸೀನಿಯಾರಿಟಿ ಲಿಸ್ಟ್‌ನ್ನು ಪ್ರಕಟಿಸುವ ಆಶ್ವಾಸನೆ ಕೊಡುತ್ತೀರಾ?

ಶ್ರೀ ಡಿ. ಮಂಜುನಾಥ್– ಅಧ್ಯಕ್ಷರೇ, ಸೀನಿಯಾರಿಟಿ ಪಟ್ಟಿಯನ್ನು ತಯಾರು ಮಾಡಿ ಇಟ್ಟಿರುತ್ತೇವೆ. ಇಲ್ಲಿ ಒಂದು ಪ್ರಶ್ನೆ ಏನೆಂದರೆ, ಇವತ್ತು ರೆಕ್ರೂಟ್‌ಮೆಂಟ್ ಕಮಿಟಿಯಲ್ಲಿ ಅನೇಕರಿಗೆ ಕೆಲಸ ಸಿಗುತ್ತದೆ. ಹಾಗೆ ಅವರಿಗೆ ಕೆಲಸ ಸಿಕ್ಕಾಗ ಆ ಬಗ್ಗೆ ಅವರು ಉದ್ಯೋಗ ವಿನಿಮಯ ಕೇಂದ್ರಕ್ಕೆ ಅದನ್ನು ತಿಳಿಸುವುದಿಲ್ಲ. ಆದ್ದರಿಂದ ಈ ಬಗ್ಗೆ ಅಧಿಕಾರಿಗಳಿಗೆ ಒಂದು ಸೂಚನೆಯನ್ನು ಕೊಟ್ಟಿದ್ದೇನೆ. ಏನು ಲೋಕಸೇವಾ ಆಯೋಗ ಮತ್ತು ಇನ್ನಿತರ ರಾಜ್ಯಮಟ್ಟದ ನೇಮಕಾತಿ ಸಮಿತಿಗಳ ಮೂಲಕ ಯಾರು ಯಾರು ಆಯ್ಕೆ ಆಗುತ್ತಾರೆ, ಅದನ್ನು ಆಯಾಯ ಇಲಾಖೆಗೆ ಬರೆದು ಅವರಿಗೆ ಕೆಲಸ ಸಿಕ್ಕಿದೆ ಎಂದು ತಿಳಿಸಿದರೆ ಆ ಪ್ಲೇಸ್‌ನ್ನು ರೌಂಡ್ ಆಫ್ ಮಾಡುತ್ತೇವೆ. ಕೆಲವರು ನೋಂದಣಿ ಮಾಡಿ ೫ ವರ್ಷಗಳಾಗಿದ್ದರೂ ಕೂಡಾ ಸಂದರ್ಶನ ಬಂದಿಲ್ಲ ಎಂದು ಹೇಳುತ್ತಿದ್ದಾರೆ ನಾನು ಮೇಲೆ ಹೇಳಿದ ಕಾರಣಗಳಿಂದ ಇದು ತಡವಾಗಿದೆ. ಇದನ್ನು ಸರಿಪಡಿಸುವುದಕ್ಕೆ ಈಗಾಗಲೇ ಕಾರ್ಯಕ್ರಮ ತೆಗೆದು ಕೊಂಡಿದ್ದೇವೆ.

ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ಮುನ್ಸೀಫ್ ಕೋರ್ಟು ಸ್ಥಾಪನೆ ಕುರಿತು.

೧೪೭೦. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ಮುನ್ಸಿಫ್ ಕೋರ್ಟು ಸ್ಥಾಪನೆಯ ಕುರಿತು ಬೇಡಿಕೆ ಹಲವಾರು ವರ್ಷಗಳಿಂದ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ನ್ಯಾಯಾಲಯ ಸ್ಥಾಪನೆಯ ಬಗ್ಗೆ ಸರಕಾರದವರು ಕೈಕೊಂಡ ಕ್ರಮ ಗಳೇನು?

ಶ್ರೀ ಎ. ಲಕ್ಷ್ಮೀಸಾಗರ್. (ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಬಂದಿದೆ.